MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 ENGLISH DAILY Subscription Yearly - Rs. - SATURDAY 19-2-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶ್ಯಯನ್ ಪಾಮೆಣ್ಣೆ ದರ ದಾಖಲೆ ಹೆಚ್ಚಳ

ಮಲೇಶ್ಶಿಯನ್ ಪಾಮೆಣ್ಣೆ ಫ್ಯೂಚರ್ ದರ ದಾಖಲೆ ಹೆಚ್ಚಳಗೊಂಡು 6000 ರಿಂಗಿಟ್ಸ್ ದಾಟಿದೆ. 2022 ರ ಪ್ರಥಮಾರ್ಧದ ಪಾಮೆಣ್ಣೆ ಉತ್ಪಾದನೆ ಇಳಿಕೆಯ ಅಂದಾಜು, ಮಲೇಶ್ಶಿಯನ್ ಪಾಮೆಣ್ಣೆ ಇನ್ವೆಂಟರಿ ದಾಸ್ತಾನು ಇಳಿಕೆಯ ಹಾಗೂ ಕೆಲವೊಂದು ಹಬ್ಬಗಳ ಸೀಸನ್ ಗಳಿಗೆ ಬೇಡಿಕೆ ಹೆಚ್ಚಳವಾಗುವ ಸಾಧ್ಯತೆ ಇದೆ. ಇದರಿಂದ ಪಾಮೆಣ್ಣೆ ಹಾಗೂ ಇತರ ಖಾದ್ಯತೈಲಗಳ ದರಗಳು ಏರುಗತಿಯಲ್ಲಿರುವ ಸಾಧ್ಯತೆಯಿದ್ದು ದರ ಇನ್ನೂ ಹೆಚ್ಚಳವಾಗುವ ಸಂಭವವಿದೆಯೆನ್ನಲಾಗುತ್ತಿದೆ. ಮೇ ತಿಂಗಳ ನಂತರ ಮಲೇಶ್ಶಿಯಕ್ಕೆ ವಿದೇಶಗಳ ಕೂಲಿಯಾಳುಗಳ ಆಗಮನವಾರಂಭವಾಗುವ ಸಾಧ್ಯತೆಗಳಿದ್ದು ನಂತರ ಪಾಮೆಣ್ಣೆ ಉತ್ಪಾದನೆ ಹೆಚ್ಚಳಗೊಂಡಲ್ಲಿ ಹಾಗೂ ಬೇಡಿಕೆ ಇಳಿಕೆಯಾದರೆ ದರ ಇಳಿಕೆಯಾಗುವ ಸಾಧ್ಯತೆಯಿದೆ. ಪ್ರಮುಖ ಸೂರ್ಯಕಾಂತಿ ಉತ್ಪಾದಕ ದೇಶಗಳಾದ ಉಕ್ರೈನ್, ರಷ್ಯಾಗಳ ಸಂಬಂಧಗಳ ಅನಿಶ್ಚಿತತೆ ಜಾಗತಿಕ ಮಾರುಕಟ್ಟೆಗೆ ಅಲ್ಲಿಂದ ಸೂರ್ಯಕಾಂತಿ ಎಣ್ಣೆ ಪೂರೈಕೆಗೆ ವ್ಯತ್ಯಯವಾದರೆ ಇತರ ಪರ್ಯಾಯ ಖಾದ್ಯತೈಲಗಳಾದ ಪಾಮೆಣ್ಣೆ,ಸೋಯಬೀನ್ ಎಣ್ಣೆಗಳ ದರ ಹೆಚ್ಚಳಕ್ಕೆ ಕಾರಣವಾಗುವ ಸಾಧ್ಯತೆಯಿದೆ.

## ಕಚ್ಚಾ ಗೋಡಂಬಿ ದರ ಇಳಿಕೆ, ಬೆಳೆಗಾರರ ನಿರಾಶೆ

ಕಚ್ಚಾ ಗೋಡಂಬಿ ದರ ಆಮದು ಕಚ್ಚಾ ಗೋಡಂಬಿ ದರಕ್ಕಿಂತಲೂ ಇಳಿಕೆಯಿರುವುದು ಹಾಗೂ ತೀರಾ ಕಡಿಮೆ ದರಕ್ಕೆ ಖರೀದಿಯಾಗುತ್ತಿರುವುದು ಬೆಳೆಗಾರರು ನಿರಾಶೆ ಹೊಂದಿದ್ದಾರೆನ್ನಲಾಗಿದೆ. ಹಲವಡೆ ಕನಿಷ್ಠ ಬೆಂಬಲ ಬೆಲೆಯ ಪ್ರಸ್ತಾಪವೂ ಮಂಡನೆಯಾಗುತ್ತಿದೆಯೆನ್ನಲಾಗಿದೆ. ಜಾಗತಿಕ ಬೆಳೆ ಉತ್ತಮವಿರುವುದರಿಂದ ಆಮದು ಕಚ್ಚಾ ಗೋಡಂಬಿ ಗಿಂತ ಉತ್ತಮ ಗುಣಮಟ್ಟದ ದೇಶಿ ಸ್ಥಳೀಯ ಕಚ್ಚಾ ಗೋಡಂಬಿಗೆ ಹೆಚ್ಚಿನ ದರ ಲಭಿಸಿದರೆ ಬೆಳೆಗಾರರಿಗೆ ಸ್ಫೂರ್ತಿಯಾಗಲಿದೆ. ಗೋಡಂಬಿ ತಿರುಳಿಗೆ ಬೇಡಿಕೆ ಹೆಚ್ಚಳವಾಗಿ ವ್ಯಾಪಾರ ಬಿರುಸುಗೊಂಡು ದರ ಹೆಚ್ಚಳವಾದರೆ ಕಚ್ಚಾ ಗೋಡಂಬಿ ದರ ಹೆಚ್ಚಳವಾಗಲು ಸಾಧ್ಯ.